ಮಕ್ಕಳಿಗೆ ಬೌ ಬೌ ಎಂದು ತೋರಿಸಲಾಗುತ್ತದೆ. ಇಂಗ್ಲಿಷನ್ನು ಆವಾಹಿಸಿಕೊಂಡವರು ಅವರ ಇಷ್ಟದಂತೆ ಇಂಗ್ಲಿಷ್‌ನಲ್ಲಿ ಕರೆಯಬಹುದು.

ನಮ್ಮ ಕನ್ನಡ ಕವಿಗಳು ಬೈಗುಳದ ಸಂದರ್ಭದಲ್ಲಿ ಶ್ವಾನ ಎಂದು ಕರೆದದ್ದು ಕಡಿಮೆ. ನಾಯಿ ಕುನ್ನಿ ಎಂದು ಬಳಸಿದ್ದೇ ಹೆಚ್ಚು. ಕುಮಾರವ್ಯಾಸ ಭಾರತದಲ್ಲಿ ದ್ರೌಪದಿಯು 'ಕೀಚಕ ಎಂಬ ಕುನ್ನಿ' 'ಕೌರವ ಎಂಬ ನಾಯಿ' ಎಂದು ಹೇಳಿದ್ದಾಳೆ. ಜೇಡರ ದಾಸಿಮಯ್ಯನು 'ನಿಮ್ಮ ದಾನವನು ಉಂಡು ಅನ್ಯರ ಹೊಗಳುವ ಕುನ್ನಿಗಳನು ಏನೆಂಬೆ' ಎಂದು ಭಗವಂತನಿಗೆ ಕೃತಜ್ಞರಾಗಿರದ ವ್ಯಕ್ತಿಗಳನ್ನು ಕುರಿತು ಹೇಳಿದ್ದಾನೆ.

ನಮ್ಮ ಋಷಿಮುನಿಗಳಿಗೆ, ದೇವಾನುದೇವತೆಗಳಿಗೆ ನಾಯಿ ಅಪವಿತ್ರ ಅಲ್ಲ. ಅರ್ಜೆಂಟಿಗೆ ಏನೂ ಸಿಗದಿದ್ದಾಗ ವಿಶ್ವಾಮಿತ್ರ ನಾಯಿ ಮಾಂಸವನ್ನು ತಿನ್ನಬೇಕಾಯಿತಂತೆ.




ರೀ! ಎದ್ದೇಳ್ರೀ ಬೇಗ, ನೀವು ಮಾಡಬೇಕಾದ ಮನೆಕೆಲಸಗಳ ಲಿಸ್ಟ್ ಮಾಡಿಟ್ಟಿದ್ದೇನೆ ತಗೊಳ್ಳಿ.

ಉಳಿಸಿದ ಬೀದಿನಾಯಿ ಎಂದು ಮಾರನೆಯ ದಿನ ಪತ್ರಿಕೆಯಲ್ಲಿ ವರದಿಯಾಗಿತ್ತು.

ನಮ್ಮೂರಿನಲ್ಲಿ ಹಿಂದೆಲ್ಲ ಭೂತಕೋಲ ನಡೆಯುವಾಗ ಬೆಳಗಿನ ಜಾವ ಭೂತದ ಬಳಿ ಊರವರು ತಮ್ಮ ಕಷ್ಟ ಕಾರ್ಪಣ್ಯ ಹೇಳಿಕೊಂಡು ಪರಿಹಾರ ಪಡೆದುಕೊಳ್ಳುವ ಕ್ರಮ ಇತ್ತು. ಒಬ್ಬಾತ ಭೂತದ ಬಳಿ, 'ನಂಗೆ ಕನಸಿನಲ್ಲಿ ದಿನಾ ರಾತ್ರಿ ನಾಯಿ ಓಡಿಸಿಕೊಂಡು ಬಂದ ಹಾಗೆ ಕಾಣ್ತದೆ' ಅಂತ ಕೇಳಿದನಂತೆ. ಆಗ ಭೂತವು 'ನೀನು ಸಿಂಡಿಕೇಟ್ ಬ್ಯಾಂಕಿನಲ್ಲಿ ಸಾಲ ತೆಕ್ಕೊಂಡಿದ್ದೀಯಾ?' ಅಂತ ಕೇಳಿತಂತೆ. ಆತ ಹೌದು ಎಂದನಂತೆ. ಆಗ ಭೂತವು 'ನೀನು ಆದಷ್ಟು ಬೇಗನೇ ಆ ಸಾಲವನ್ನು ತೀರಿಸು' ಎಂದು ತಾಕೀತು ಮಾಡಿತಂತೆ. ಇದು ಒಂದು ಜೋಕಾಗಿ ತುಳುನಾಡಿನಲ್ಲಿ ಪ್ರಚಲಿತದಲ್ಲಿತ್ತು. ಆಗ ಸಿಂಡಿಕೇಟ್ ಬ್ಯಾಂಕಿನ ಲಾಂಛನ ನಾಯಿ ಆಗಿತ್ತು. ಈಗ ಆ ಬ್ಯಾಂಕೇ ಇಲ್ಲ.

ದತ್ತಾತ್ರೇಯರ ವಾಹನ ನಾಯಿ. ಹಾಗಾಗಿ ನಾಯಿಯನ್ನು ನಾರಾಯಣನಿಗೆ ಹೋಲಿಸಿದ್ದಾರೆ. ಮಹಾಭಾರತದಲ್ಲೂ ನಾಯಿಯ ಮಹತ್ವದ ಕುರಿತಾದ ಉಲ್ಲೇಖವಿದೆ. ಪಾಂಡವರು ಸ್ವರ್ಗಾರೋಹಣದ ಸಂದರ್ಭದಲ್ಲಿ ಒಬ್ಬೊಬ್ಬರಾಗಿ ದೇಹ ತ್ಯಾಗ ಮಾಡುತ್ತಾರೆ. ಕೊನೆಯಲ್ಲಿ ಧರ್ಮರಾಯ ಒಬ್ಬನೇ ಉಳಿಯುತ್ತಾನೆ. ಸ್ವರ್ಗದ ಒಳಗೆ ಇನ್ನೇನು ಹೋಗಬೇಕು ಆಗ ಅಲ್ಲಿನ ದ್ವಾರಪಾಲಕರು ಅವನನ್ನು ತಡೆಯುತ್ತಾರೆ. ಅದಕ್ಕೆ ಕಾರಣ ಅವನೊಂದಿಗೆ ಹೆಜ್ಜೆ ಹಾಕಿದ ನಾಯಿ. ಧರ್ಮರಾಯನು `ನನ್ನೊಂದಿಗೆ ಆ ನಾಯಿಯನ್ನೂ ಕೂಡ ಒಳಗಡೆ ಬಿಡುವುದಾದರೆ ಮಾತ್ರ ಸ್ವರ್ಗದ ಒಳಗೆ ಬರುತ್ತೇನೆ. ಏಕೆಂದರೆ ಅದು ನನ್ನೊಂದಿಗೆ ನಿಯತ್ತಿನಿಂದ ಹೆಜ್ಜೆ ಹಾಕುತ್ತ ಬಂದಿದೆ. ಅದು ನನ್ನ ಸಖ' ಎಂದು ಹೇಳುತ್ತಾನೆ. ಆ ಮೂಲಕ ಕೊನೆಯ ಪರೀಕ್ಷೆಯಲ್ಲಿಯೂ ಗೆಲ್ಲುತ್ತಾನೆ. ಸ್ವತಃ ಆತನ ತಂದೆಯಾದ ಯಮಧರ್ಮ ರಾಯನೇ ಆ ರೂಪದಲ್ಲಿ ಬಂದು ಮಗನನ್ನು ಪರೀಕ್ಷೆ ಮಾಡುತ್ತಾನೆ ಎನ್ನುವ ಉಲ್ಲೇಖ ಬರುತ್ತದೆ.

ನಮ್ಮ ದೇಶದಲ್ಲಿ ಈಶಾನ್ಯ ರಾಜ್ಯಗಳಲ್ಲಿ ನಾಯಿಯ ಮಾಂಸ ಆಹಾರವಾಗಿ ಬಳಕೆಯಲ್ಲಿ ಇದೆ. ರಹಮತ್ ತರೀಕೆರೆ ಅವರು ತ್ರಿಪುರಾ ರಾಜ್ಯದಲ್ಲಿ ಅಡ್ಡಾಡುವಾಗ ರಸ್ತೆ ಬದಿಯಲ್ಲಿ ನಾಯಿಯ ಚರ್ಮ ಸುಲಿದು ಕೆಂಡದ ಮೇಲೆ ಸುಡುವುದನ್ನು ನೋಡಿದ್ದನ್ನು ದಾಖಲಿಸಿದ್ದಾರೆ. ನಾನೂ ಕೂಡ ಅಸ್ಸಾಂ, ಮೇಘಾಲಯ ಸುತ್ತಾಡುವಾಗ ಮಾಂಸದ ಅಂಗಡಿಗಳಲ್ಲಿ ಇತರ ಪ್ರಾಣಿಗಳ ಜೊತೆಗೆ ನಾಯಿಯನ್ನೂ ಪಂಜರದ ಒಳಗೆ ಇಟ್ಟದ್ದನ್ನು ನೋಡಿದ್ದೇನೆ. ನಾವು ನಮ್ಮದೇ ಆಹಾರ ಶ್ರೇಷ್ಠ ಎಂದು ಬಿಂಬಿಸಿಕೊಳ್ಳುತ್ತ ನಾಯಿ ಎನ್ನುವುದು ತಿನ್ನಲು ಅರ್ಹ ಪ್ರಾಣಿಯೇ ಅಲ್ಲ ಎಂದು ಬಿಂಬಿಸಿಕೊಳ್ಳುತ್ತಿರುತ್ತೇವೆ. 'ಬೌ ಬೌ ಬಿರಿಯಾನಿ' ಎಂಬ ಉಲ್ಲೇಖ ಸಿನಿಮಾ ಒಂದರಲ್ಲಿ ಇದೆ. ಅದು ನಿಕೃಷ್ಟ ಎಂಬ ಧ್ವನಿಯಲ್ಲಿ ಮೂಡಿ ಬಂದಿದೆ.

ಎಷ್ಟೋ ಜನ ಹೇಳುವುದುಂಟು ನಂಬಿಕೆ ಮತ್ತು ವಿಶ್ವಾಸಕ್ಕೆ ಇರುವ ಏಕೈಕ ಪ್ರಾಣಿ ನಾಯಿ ಅಂತ. ಮನುಷ್ಯರು ಢೋಂಗಿ ಕೆಲಸ ಮಾಡಿದರೆ 'ಆ ನಾಯಿಗೆ ಇರುವ ನಿಯತ್ತು ನಿಂಗೆ ಇಲ್ವಲ್ಲಾ' ಅಂತ ಹೀನಾಯವಾಗಿ ಬಯ್ಯುವುದಿದೆ. ಕೆಲವು ವರ್ಷಗಳ ಹಿಂದೆ ತುಮಕೂರಿನಲ್ಲಿ ಒಂದು ಘಟನೆ ನಡೆದಿತ್ತು. ಒಬ್ಬ ಅಜ್ಜಿ ಇದ್ದಳು. ಅವಳು ಭಿಕ್ಷುಕಿ. ರಸ್ತೆ ಬದಿ ಅಲ್ಲಿ ಇಲ್ಲಿ ಮಲಗುತ್ತಿದ್ದಳು. ಅವರಿವರು ಕೊಟ್ಟ ಆಹಾರ ತಿನ್ನುತ್ತಿದ್ದಳು. ತಾನು ತಿನ್ನುವಾಗ ಅಲ್ಲಿಯೇ ಇದ್ದ ಬೀದಿ ನಾಯಿ ಒಂದಕ್ಕೂ ಹಾಕುತ್ತಿದ್ದಳು. ಒಂದು ದಿನ ಎಂದಿನಂತೆ ಬೆಳಿಗ್ಗೆ ಆ ನಾಯಿಗೆ ತಿಂಡಿ ಹಾಕಿ ಮುಂದೆ ಸಾಗಿದಳು. ಆ ನಾಯಿಯೂ ಅವಳನ್ನು ಹಿಂಬಾಲಿಸಿತು. ಸ್ವಲ್ಪ ದೂರ ಹೋಗುವಷ್ಟರಲ್ಲಿ ಆ ನಾಯಿ ಅವಳ ಸೀರೆಯನ್ನು ಹಿಡಿದು ಜಗ್ಗಿತು. ಅವಳು ಅದನ್ನು ದೊಣ್ಣೆಯಿಂದ ಹೊಡೆದು ಓಡಿಸಲು ಯತ್ನಿಸಿದಳು. ಅದು ಮತ್ತೂ ಹಾಗೆಯೇ ಅವಳ ಸೀರೆಯನ್ನು ಜಗ್ಗುತ್ತಿತ್ತು. ಯಾವಾಗ ಇವಳು ತನ್ನ ಮಾತಿಗೆ ಜಗ್ಗುವುದಿಲ್ಲ ಎಂದು ಆ ನಾಯಿಗೆ ಅನಿಸಿತೋ ಅದು ಓಡಿ ಆಕೆಯಿಂದ ಮುಂದಕ್ಕೆ ಹೋಗಿ ಕರೆಂಟು ಹರಿಯುತ್ತಿದ್ದ ತಂತಿಯ ಮೇಲೆ ಕಾಲಿಟ್ಟು ಪ್ರಾಣ ಬಿಟ್ಟಿತು. ಅಷ್ಟರಮಟ್ಟಿಗೆ ಅದು ಆಕೆಗೆ ನಿಷ್ಠವಾಗಿತ್ತು. ಮುದುಕಿಯ ಪ್ರಾಣ

ಇದು ರೀಲ್ಸ್‌ಗಳ ಯುಗ. ಇನ್ಸ್ಟಾಗ್ರಾಂ, ಫೇಸ್‌ಬುಕ್ ಇತ್ಯಾದಿಗಳನ್ನು ತೆರೆದರೆ ನಾಯಿಗಳನ್ನೇ ಆಧಾರವಾಗಿಟ್ಟುಕೊಂಡ ರೀಲ್ಸ್‌ಗಳು ಸಾಕಷ್ಟು ಸಿಗುತ್ತವೆ. ದಿನ ಬೆಳಗಾದರೆ ತಮ್ಮ ನಾಯಿ ಹೀಗೆ ಮಾಡಿತು ಹಾಗೆ ಮಾಡಿತು ಎಂದು ವಿವರಣೆ ಕೊಟ್ಟು ರೀಲ್ಸ್ ಮಾಡಿ ಅಪ್‌ಲೋಡ್ ಮಾಡುತ್ತಿರುತ್ತಾರೆ. ಕೆಲವು ಊರುಗಳ ಉತ್ಸವಗಳಲ್ಲಿ ಡಾಗ್ ಶೋ ಮಾಡಿಸುವುದಿದೆ. ಅಲ್ಲಿ ಬರುವ ಚಿತ್ರ ವಿಚಿತ್ರದ ನಾಯಿಗಳನ್ನು ನೋಡುವುದೇ ಒಂದು ಸೊಗಸು. ತಮ್ಮ ತಮ್ಮ ಭಾಷೆಗಳ ಮೂಲಕ ಅವುಗಳಿಂದ ಕಸರತ್ತನ್ನು ಪ್ರದರ್ಶಿಸಿ ಬಹುಮಾನ ಗಳಿಸುತ್ತಾರೆ. ಇನ್ನು ಕೆಲವರು ತಾವು ನಾಯಿ ಸಾಕಲು ಸಾಧ್ಯವಾಗದ ಕಾರಣ ಪಾರ್ಕು, ಹಾದಿ ಬೀದಿಗಳಲ್ಲಿ ಇರುವ ಬೀದಿ ನಾಯಿಗಳಿಗೆ ಆಹಾರ ಹಾಕಿ ಕೃತಾರ್ಥರಾಗುತ್ತಾರೆ. ಅವರ ಕೃತ್ಯ ನೋಡಿದ ಅನೇಕರು 'ನಿಮಗೆ ನಾಯಿ ಬಗ್ಗೆ ಅಷ್ಟೊಂದು ಪ್ರೀತಿ ಇದ್ರೆ ಮನೆಗೆ ತೆಕೊಂಡು ಹೋಗಿ ಸಾಕಿ. ಕರ್ಮ ಕರ್ಮ ನೀವು ಬಿಸ್ಕೆಟ್ ಹಾಕ್ತೀರಿ. ಏನನ್ನೂ ಹಾಕದೇ ಇರುವ ನಮ್ಮಂಥವರನ್ನು ನೋಡಿ ಮೈ ಮೇಲೆ ಹಾರ್ತವೆ' ಅಂತ ಕೂಗಾಡುವುದನ್ನು ನಿತ್ಯ ವಾಕಿಂಗಿನಲ್ಲಿ ನೋಡುತ್ತಿರುತ್ತೇನೆ. ಬಿಸ್ಕೆಟ್ ಹಾಕುವವರೂ ಹಾಕದಿರುವವರೂ ಪರಸ್ಪರ ಬೌ ಬೌ ಮಾಡಿಕೊಳ್ಳುವ ದೃಶ್ಯ ಸಾಮಾನ್ಯ.

ನಾನು ಕೆಲಸಕ್ಕೆ ಸೇರಿ ಮದುವೆ ಆದ ಹೊಸದು. ದೂರದ ಊರಿನಲ್ಲಿ ನಮ್ಮ ಪುಟ್ಟ ಸಂಸಾರ. ಒಂದು ಪುಟ್ಟ ಬಾಡಿಗೆ ಮನೆಯಲ್ಲಿ ಇದ್ದೆ. ಯಜಮಾನರ ಮನೆಗೂ ನಾವು ಇದ್ದ ಮನೆಗೂ ಒಳ ಬದಿಯಿಂದ ಕನೆಕ್ಷನ್ ಇತ್ತು. ಒಂದು ರಾತ್ರಿ ಸಿನಿಮಾ ನೋಡಿ ಬಂದವರು ಊಟ ಮಾಡಿ ಇನ್ನೇನು ಮಲಗಬೇಕು ಅಂದುಕೊಳ್ಳುತ್ತಿದ್ದೆವು. ಅಷ್ಟರಲ್ಲಿ ಯಜಮಾನರ ತಾಯಿ ವಯಸ್ಸಾದವರು ಮನೆಗಳ ನಡುವೆ ಕನೆಕ್ಷನ್ ಇದ್ದ ಒಳ ಬಾಗಿಲನ್ನು ಬಡಿದರು. ನಾನು ತೆಗೆದೆ. ಪಾತ್ರೆಯಲ್ಲಿ ಒಂದಿಷ್ಟು ಅನ್ನ, ಸಾಂಬಾರು ಹಿಡಿದುಕೊಂಡು ನಿಂತಿದ್ದರು. ನಮ್ಮಊಟ ಆಗಿದೆ ಅಂತ ಹೇಳಿದೆವು. ಅದಕ್ಕೆ ಅವರು, 'ತೊಂದ್ರೆ ಇಲ್ಲ ಇಟ್ಟುಕೊಳ್ಳಿ. ನಾವು ಮುಸುರೆ ತಿನ್ನೂದಿಲ್ಲ. ನಾಳೆ ಬೆಳಿಗ್ಗೆ ಬಿಸಿ ಮಾಡಿಕೊಂಡು ತಿನ್ನಿ. ನಾವು ನಾಯಿಗೆ ಹಾಕ್ತಾ ಇದ್ದೆವು. ಅದು ಸತ್ತು ಹೋಗಿದೆ. ನೀವು ಇದ್ದೀರಿ. ನಿಮಗೆ ಆಗ್ತದೆ ಅಂತ ಕೊಡ್ತಾ ಇದ್ದೇನೆ' ಅಂದ್ರು.! ಅವರು ಹೋದ ಮೇಲೆ, ಹೆಂಡತಿ 'ಇದೇನ್ರೀ ಇದು!? ನಾವು ನಾಯಿಗಿಂತ ಕಡೆಯಾಗಿ ಹೋದೆವಾ? ಅದೂ ಅಲ್ದೆ ನಾಯಿ ಸತ್ತು ಹೋಗಿದೆ ನೀವು ಇದ್ದೀರಿ ಅಂತಾರೆ ಅದೂ ಶುಕ್ರವಾರ ಇವತ್ತು' ಅಂತ ಕಣ್ಣೀರು ತುಂಬಿಕೊಂಡು ಹೇಳಿದಳು. ಅವರ ಭಾವ ಅವಳಿಗೆ ಅರ್ಥ ಮಾಡಿಸುವ ಹೊತ್ತಿಗೆ ನನ್ನದು ನಾಯಿಪಾಡಾಗಿತ್ತು ಅಂತ ಬೇರೆ ಹೇಳಬೇಕಿಲ್ಲ ತಾನೇ?

ಪ್ರತಿಕ್ರಿಯಿಸಿ: feedback@sudha.co.in

